

# ಭಾರತದಲ್ಲಿ ನಡೆಯುವ ಪ್ರೀಮಿಯರ್ ಲೀಗ್‌ಗಳು

| ಟೂರ್ನಿ | ಕ್ರೀಡೆ |
|---|---|
| ಇಂಡಿಯನ್ ಪ್ರೀಮಿಯರ್ ಲೀಗ್ | ಕ್ರಿಕೆಟ್ |
| ತಮಿಳುನಾಡು ಪ್ರೀಮಿಯರ್ ಲೀಗ್ | ಕ್ರಿಕೆಟ್ |
| ಕರ್ನಾಟಕ ಪ್ರೀಮಿಯರ್ ಲೀಗ್ | ಕ್ರಿಕೆಟ್ |
| ಇಂಡಿಯನ್ ಸೂಪರ್ ಲೀಗ್ | ಫುಟ್‌ಬಾಲ್ |
| ಐ ಲೀಗ್ | ಫುಟ್‌ಬಾಲ್ |
| ಪ್ರೊ ಕುಸ್ತಿ ಲೀಗ್ | ಕುಸ್ತಿ |
| ಪ್ರೊ ಬ್ಯಾಡ್ಮಿಂಟನ್ ಲೀಗ್ | ಬ್ಯಾಡ್ಮಿಂಟನ್ |
| ಇಂಡಿಯನ್ ಹಾಕಿ ಲೀಗ್ | ಹಾಕಿ |
| ಪ್ರೀಮಿಯರ್ ಫುಟ್‌ಸಾಲ್ | ಫುಟ್‌ಸಾಲ್ |
| ಪ್ರೊ ಕಬಡ್ಡಿ ಲೀಗ್ | ಕಬಡ್ಡಿ |
| ಇಂಡಿಯನ್ ರೇಸಿಂಗ್ ಲೀಗ್ | ಆಟೊಮೊಬೈಲ್ |

ಇತ್ತೀಚೆಗಷ್ಟೇ ಪ್ರಕಾಶ ಪಡುಕೋಣೆ ಮತ್ತು ರಾಹುಲ್ ದ್ರಾವಿಡ್ ಅವರ ಕ್ರೀಡಾ ತರಬೇತಿ ಕೇಂದ್ರವು ದೇವನಹಳ್ಳಿ ಸಮೀಪ ತಲೆ ಎತ್ತಿದೆ. ಎಲ್ಲ ರೀತಿಯ ಸೌಲಭ್ಯಗಳು ಅಲ್ಲಿವೆ. ವಿಶಾಲವಾದ ಜಾಗದಲ್ಲಿ ಅರಳಿರುವ ಈ ತರಬೇತಿ ಶಾಲೆಯಲ್ಲಿ ನುರಿತ ಕೋಚ್‌ಗಳು ಇದ್ದಾರೆ. ಇದೊಂದು ಬಹುಕ್ರೀಡಾ ತರಬೇತಿ ಸಂಕೀರ್ಣವಾಗಿ ರೂಪುಗೊಂಡಿದೆ.

ಬೆಂಗಳೂರಿನಲ್ಲಿ ಈಗ ಫುಟ್‌ಬಾಲ್ ಕ್ರೀಡೆಗೂ ಸುಗ್ಗಿ ಕಾಲ. ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುತ್ತಿದೆ. ಏಷ್ಯನ್ ಫೆಡರೇಷನ್ (ಎಎಫ್‌ಸಿ) ಕಪ್ ಟೂರ್ನಿ, ಐಎಸ್‌ಎಲ್ ಟೂರ್ನಿಗಳಲ್ಲಿ ತನ್ನದೇ ಛಾಪು ಒತ್ತಿದೆ. ಕಂಠೀರವ ಕ್ರೀಡಾಂಗಣದಲ್ಲಿ ಯಾವುದೇ ಫುಟ್‌ಬಾಲ್ ಪಂದ್ಯ ನಡೆದರೂ ಪ್ರೇಕ್ಷಕರ ಗ್ಯಾಲರಿ ಗಿಜಿಗುಡುತ್ತದೆ. ಬಿಎಫ್‌ಸಿ ನಾಯಕ ಸುನಿಲ್ ಚೆಟ್ರಿ, ಕಾಲ್ಚಳಕದ ಮಾತ್ರಿಕ ಮಿಕು ಅಭಿಮಾನಿಗ ಕಣ್ಮಣಿಯಾಗಿದ್ದಾರೆ. ಜಿಂದಾಲ್ ಸ್ಪೋರ್ಟ್ಸ್ ಫೌಂಡೇಷನ್ (ಜೆಎಸ್‌ಡಬ್ಲ್ಯು) ಈ ತಂಡ ದ ಮಾಲೀಕತ್ವ ವಹಿಸಿದೆ.

ಪ್ರೊ ಕುಸ್ತಿ ಲೀಗ್‌ನಲ್ಲಿ ಆಡುವ ಕುಸ್ತಿಪಟುಗಳಿಗೂ ಜೆಎಸ್‌ಡಬ್ಲ್ಯು ಕ್ರೀಡಾ ಪ್ರತಿಷ್ಠಾನವು ನೆರವು ನೀಡುತ್ತಿದೆ. ವಿಜಯನಗರದಲ್ಲಿ (ಕೊಪ್ಪಳ ಸಮೀಪ) ತರಬೇತಿ ಸೌಲಭ್ಯವನ್ನೂ ಅಭಿವೃದ್ಧಿಪಡಿಸಿದೆ. ಬೆಂಗಳೂರಿನಲ್ಲಿಯೂ ತರಬೇತಿ ವ್ಯವಸ್ಥೆ ಮಾಡಿದೆ. ಜ್ಞಾನಭಾರತಿ ಸಮೀಪವಿರುವ ಭಾರತೀಯ ಕ್ರೀಡಾ ಪ್ರಾಧಿಕಾರ (ಎಸ್‌ಎಐ) ಈಗ ದೇಶದ ಅತ್ಯುತ್ತಮ ತರಬೇತಿ ಕೇಂದ್ರಗಳಲ್ಲಿ ಒಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಭಾರತದ ಪುರುಷ ಮತ್ತು ಮಹಿಳಾ ಹಾಕಿ ತಂಡಗಳ ತರಬೇತಿ ಶಿಬಿರಗಳು ನಡೆಯುವುದು ಇಲ್ಲಿಯೇ. ಕಳೆದ ಒಲಿಂಪಿಕ್ಸ್‌ಗೆ ಹೋಗುವ ಮುನ್ನವೂ ಹಾಕಿ ತಂಡಗಳು ಇಲ್ಲಿ ತರಬೇತಿ ಪಡೆದಿದ್ದವು. ಇದೀಗ ಅಜ್ಲನ್ ಶಾ ಕಪ್ ಮತ್ತು ವಿಶ್ವಕಪ್ ಹಾಕಿ ಟೂರ್ನಿಗಳಿಗೆ ಪೂರ್ವ ಸಿದ್ಧತೆಯನ್ನೂ ಇಲ್ಲಿ ಮಾಡಿಕೊಂಡಿವೆ. ಅಲ್ಲದೇ ಅಥ್ಲೆಟಿಕ್ಸ್ ತಂಡವೂ ಇಲ್ಲಿ ತರಬೇತಿ ಪಡೆಯುತ್ತದೆ. ಇತ್ತೀಚೆಗಷ್ಟೇ ರಾಷ್ಟ್ರೀಯ ರೇಸ್ ವಾಕ್‌ನಲ್ಲಿ ದಾಖಲೆ ಬರೆದಿದ್ದ ಸೌಮ್ಯ ಕೂಡ ಇಲ್ಲಿಯೇ ತರಬೇತಿ ಪಡೆದಿದ್ದರು. ಟಾಪ್ ಯೋಜನೆಗೆ ಆಯ್ಕೆಯಾಗಿರುವ ವಿಜಯಕುಮಾರಿ ಅವರೂ ಇಲ್ಲಿಯೇ ಇದ್ದಾರೆ.

ಕಂಠೀರವ ಕ್ರೀಡಾಂಗಣದಲ್ಲಿಯೂ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯಿಂದ ತರಬೇತಿ ಲಭ್ಯವಿದೆ. ಹಿರಿಯ ಕೋಚ್ ಬೀಡು ಅವರು ದಶಕಗಳಿಂದ ಇಲ್ಲಿ ಹಲವು ಅಥ್ಲೀಟ್‌ಗಳಿಗೆ ತರಬೇತಿ




